with the firm known as Messrs. Shankar & Co., and secondly, that the undivided Hindu family of which I am a member is a partner in business in the said Messrs. Shankar & Co., are not true. And thirdly, that I have become disqualified from being a member of the Legislative Assembly under Section 7 (*d*) of the Representation of the People Act, 1951, is neither true nor valid in law.

Mr. SPEAKER.—So, I understand that you will make an additional statement after a copy of Sri Narayana Reddy's statement is furnished to you.

Sri B. V. NARAYANA REDDY.—Shall I give a copy, Sir ?

Mr. SPEAKER.—Yes.

(A copy was given to Sri T. Siddalingaiya.)

Sri T. SIDDALINGAIYA.—I will first go through this statement. After lunch I will say what I have got to say.

MYSORE (PERSONAL AND MISCELLANEOUS) INAMS ABOLITION BILL, 1953.

Motion to consider (continued).

Mr. SPEAKER.—I desire to know if there are a considerable number of speakers willing to speak on this Bill to fix some time limit if necessary.

(Many Members rose).

Mr. SPEAKER.—Each one may have seven to ten minutes. Ordinarily, time limit is not fixed for any member who speaks on a Bill. If there is no time today, we will have to continue discussion on the Bill the next day also.

Sri KADIDAL MANJAPPA (Minister for Revenue and Public Works).—I leave it to the Chair, Sir.

ಶ್ರೀ ಎಸ್. ಗೋಪಾಲಗೌಡ, (ಸಾಗರ-ಹೊಸನಗರ).—ಸ್ವಾಮಿ, ಗುಂಡಪ್ಪಗೌಡರ ಸಮಿತಿಯ ವರದಿಯ ಪ್ರತಿಗಳನ್ನು ಈ ಸಭೆಯ ಸದಸ್ಯರಿಗೆ ಒದಗಿಸಲಾಗುತ್ತದೆಯೆ ?

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಇನಾಂ ರದ್ದಿಯಾತಿ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈಗಾಗಲೇ ಅನೇಕ ಮಾನ್ಯಸದಸ್ಯರು ಹೇಳಿರುವ ಹಾಗೆ ಈ ಮಸೂದೆ ಭೂಸುಧಾರಣೆಯಲ್ಲಿ ಒಂದು ದೊಡ್ಡ ಹೆಜ್ಜೆಯನ್ನಿಟ್ಟ ಹಾಗಿದೆ. ಕಾಂಗ್ರೆಸ್ ಸರ್ಕಾರದವರು ಭೂಸುಧಾರಣೆ ಮಾಡುವುದಕ್ಕೆ ಹಿಂಜರಿಯುತ್ತಿದ್ದಾರೆ, ಇವರಿಗೆ ಧೈರ್ಯವಿದೆಯೋ ಇಲ್ಲವೋ ಎಂಬುದಾಗಿ ಮಾನ್ಯಸದಸ್ಯರು ಕೆಲವರು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಸರ್ಕಾರಗಳಿಗೆ ಭೂಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಧೈರ್ಯವಿಲ್ಲ ಎಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ; ಮತ್ತು ಪ್ರಗತಿಮಾರ್ಗದಲ್ಲಿ ಹೋಗುತ್ತಿಲ್ಲ, ಪಿರೋಗಾಮಿ ಮಾರ್ಗದಲ್ಲಿ ಹೋಗುತ್ತಿದ್ದಾರೆಂದು ಆಪಾದನೆ ಮಾಡಿದ್ದಾರೆ. ಇಂಡಿಯಾದೇಶದಲ್ಲಿ ಈಗಾಗಲೇ ಅನೇಕ ಸರ್ಕಾರದವರು ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡಿ ಜಾರಿಗೆ ತರುವುದರಲ್ಲಿದ್ದಾರೆಂಬುದನ್ನು ಪ್ರಾಪಕದಲ್ಲಡಬೇಕೆಂದು ಮಾನ್ಯಸದಸ್ಯರಲ್ಲಿ ಪ್ರಾರ್ಥಿಸುತ್ತೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ದೊಡ್ಡ ಜಮೀನ್ದಾರಿ ಪದ್ಧತಿಯಿಲ್ಲವೆಂಬುದನ್ನು ನಾವೆಲ್ಲರೂ ತಿಳಿದಿದ್ದೇವೆ, ಆದರೆ ಇದೇರೀತಿಯ ಮತ್ತೊಂದು ಪದ್ಧತಿಯೆಂದರೆ ಅದು ಇನಾಂ ಪದ್ಧತಿ. ಈ ಪದ್ಧತಿಯನ್ನು ಬಿಟ್ಟರೆ ಇನ್ನುಳಿತವಾರಿ ಪದ್ಧತಿಯಲ್ಲಿ ಹಿಡುವಳಿ ರೈತರಿದ್ದಾರೆ. ನಾನಾಗಲೇ ಹೇಳಿದಹಾಗೆ ಜಮೀನ್ದಾರಿ ಪದ್ಧತಿ ರದ್ದಾದಮೇಲೆ ಭೂಸುಧಾರಣೆಯಲ್ಲಿ ಇನ್ನೂ ಮುಂದೆಹೋಗಬೇಕೆಂದರೆ ರೈತವಾರಿ ಪದ್ಧತಿಯನ್ನು ಬದಲಾಯಿಸಬೇಕು. ಇದನ್ನು ಬದಲಾಯಿಸುವುದುಹೇಗೆ. ಯಾವರೀತಿ ಎಂಬುದನ್ನು ಯೋಚನೆಮಾಡುವುದಾದರೆ, ಈಗಿರತಕ್ಕ ಹೋಲ್ಡರುಗಳು, ಅವರ ಕುಟುಂಬಕ್ಕೆ ಎಷ್ಟು ಜಮೀನನ್ನು ಇಟ್ಟುಕೊಳ್ಳಬೇಕೆಂಬುದನ್ನು ನಿರ್ಧಾರಮಾಡಬೇಕು. ಇದಕ್ಕೆ Maximum ceiling ಅಥವಾ ಪರಮಾವಧಿ ಎಷ್ಟು ಜಮೀನನ್ನು ಒಬ್ಬರೈತ ತಾನುಇಟ್ಟುಕೊಳ್ಳಬಹುದು, ಕನಿಷ್ಠ ಪ್ರಮಾಣ ಎಷ್ಟು ಇರಬೇಕು ಎಂಬುದನ್ನು ನಿರ್ಧಾರಮಾಡಬೇಕಾಗುತ್ತದೆ. ಈ ವಿಷಯವನ್ನೆಲ್ಲಾ ಕೂಲಂಕಷವಾಗಿ ಶ್ರೀ ಗುಂಡಪ್ಪಗೌಡರ ಭೂಸುಧಾರಣೆ ಸಮಿತಿಯವರು ಚರ್ಚೆಮಾಡಿದ್ದಾರೆ. ರೈತವಾರಿ ಪದ್ಧತಿಯಲ್ಲಿಯೂ ಕೂಡ ನಮ್ಮ ದೇಶದಲ್ಲಿ 50 ಎಕರೆಗೆ ಮೇಲ್ಪಟ್ಟಿರುವ ಜನರು ಬಹಳ ಕಡಿಮೆಯಿದ್ದಾರೆಂಬುದು ಈಗಾಗಲೇ ಸಭೆಯ ಗಮನಕ್ಕೆ ಬಂದಿದೆ. ಹೆಚ್ಚು ಜಮೀನಿರುವವರ ಹತ್ತಿರವಿರುವ ಜಮೀನನ್ನು ತೆಗೆದುಕೊಂಡು. Economic Holding ಗೊತ್ತುಮಾಡಿ, ಅಷ್ಟುಮಾತ್ರ ಅವರಿಗೆ ಬಿಟ್ಟು ಅದಕ್ಕಿಂತ ಹೆಚ್ಚಾಗಿರುವುದನ್ನೆಲ್ಲಾ ಅವರಿಂದತೆಗೆದು ಕೊಂದು ಹಂಚುವುದಕ್ಕೆ ತೀರ್ಮಾನ ಮಾಡುವುದಾದರೆ ಅದಕ್ಕೆ ನಾನು ಒಪ್ಪುತ್ತೇನೆ. ಆದೂ ಕೂಡ ಪ್ರಗತಿದಾಯಕವಾದ ಮಾರ್ಗವೇ ಹೌದು. ಆದರೆ ಈರೀತಿ ಒಂದು ಸುಧಾರಣೆಯಾಗಬೇಕೆಂದರೆ ನಾನು ಒಂದೇ ಒಂದು ಪ್ರಶ್ನೆಕೇಳುತ್ತೇನೆ. ಈ ರೀತಿ ಹಂಚಿಕೆ ರೈತನಲ್ಲಿರತಕ್ಕ ಜಮೀನಿಗೆ ಮಾತ್ರ ಅನ್ವಯಿಸಬೇಕೇ ಅಥವಾ ಇತರ ಐಶ್ವರ್ಯ, ಮನೆ, ಹಣ ಇತ್ಯಾದಿಗಳಿಗೂ ಕೂಡ ಅನ್ವಯಿಸಿ ಅವಕ್ಕೆ ಪರಮಾವಧಿಯನ್ನು ಗೊತ್ತುಮಾಡಬೇಕೆ ? ಸ್ವಾಭಾವಿಕವಾಗಿ ಈ ಪ್ರಶ್ನೆಯೂ ಕೂಡ ಏಳುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಅವರು ಪಟ್ವಾದವರ ತಂಟೆಗೆ ಹೋಗುವುದಿಲ್ಲ, ಅವರನ್ನು ಕಂಡರೇ ಹೆದರಿಕೆ !

ಶ್ರೀ ಡಿ. ದೇವರಾಜ ಅರಸ್.—ಈ ರೀತಿ ಪರಮಾವಧಿಯನ್ನು ನಿರ್ಧಾರಮಾಡಬೇಕೆಂದು ಹೇಳಿದರೆ ಬರೀ ಭೂಮಿಗೆ ಮಾತ್ರ ಅನ್ವಯಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಮ್ಮ ದೇಶದಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ನೂರಕ್ಕೆ 75 ರಿಂದ 80ರ ವರೆಗೆ ರೈತರೇ ಇರುವ ದೇಶದಲ್ಲಿ, ಈ ರೀತಿ ಭೂಸುಧಾರಣೆ ಮಾಡಬೇಕಾದರೆ, ಅವರ ಅಭಿಪ್ರಾಯವೇನಿದೆ, ಅವರು ಈ ಏರ್ಪಾಡಿಗೆ ಹೊಂದಿಕೊಳ್ಳುವುದಕ್ಕೆ ಸಾಧ್ಯನೆ ಎಂಬುದೆಲ್ಲವನ್ನೂ ನಾವು ರೈತಪ್ರತಿನಿಧಿಗಳಾಗಿ, ರೈತರಾಗಿ ಯೋಚನೆಮಾಡಬೇಕಾಗಿದೆ. ಒಂದುವೇಳೆ ಇವೀ ದೇಶಕ್ಕೇ, ಎರ್ಲಾ ಐಶ್ವರ್ಯಕ್ಕೂ ಹೀಗೊಂದು ಪರಮಾವಧಿಯನ್ನು ಗೊತ್ತುಮಾಡುವುದಾದರೆ, ನಾನು ರೈತರ ಪ್ರತಿನಿಧಿಯಾಗಿ ಒಪ್ಪುತ್ತೇನೆ. ಹಾಗಿಲ್ಲದೆ ಬರೀ ರೈತರನ್ನಿರುವ ಕಡೆಗಿನಿಗೆ ಮಾತ್ರ ಅನ್ವಯಿಸಬೇಕೆಂದರೆ ಅದು ಸಾಧ್ಯವಿಲ್ಲ. ಇದಕ್ಕೆ ಜನರು ಒಪ್ಪುವುದಿಲ್ಲವೆಂದು ನಿಷ್ಪಕ್ಷಪಡಿಸಲಿಚ್ಛಿಸುತ್ತೇನೆ. ಈಗ ನಾವು ಹೋಗುತ್ತಿರುವ ಮಾರ್ಗ ಪ್ರಗತಿಪರವಾದ ಮಾರ್ಗವಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ಹೊರದೇಶಗಳನ್ನು ಎಂದರೆ, ರಷ್ಯಾದೇಶ, ಚೈನಾದೇಶ ಇತ್ಯಾದಿ ದೇಶಗಳನ್ನು ಉದಾಹರಿಸಿ ಅವರು ಹೋಗಕ್ಕೆ ಮಾರ್ಗದಲ್ಲಿ ನಾವು ಹೋಗುತ್ತಿಲ್ಲ. ಅವರು ಅನುಸರಿಸುತ್ತಿರುವ ಮಾರ್ಗ ಪ್ರಗತಿಪರವಾದುದು ನಮ್ಮದು ಪ್ರಗತಿವಿರೋಧ ಎಂದು ಹೇಳಿದರು. ಇದೊಂದು ದೊಡ್ಡ ಪ್ರಶ್ನೆ. ಪ್ರಪಂಚ ಪ್ರಗತಿಮಾರ್ಗದಲ್ಲಿ ಹೋಗುತ್ತಿದೆಯೆ ಇಲ್ಲವೆ. ಅಥವಾ ಪ್ರಪಂಚಕ್ಕೇ ಒಂದು ಕೇಡುಂಟಾಗುವ ಮಾರ್ಗದಲ್ಲಿ ಹೋಗುತ್ತಿದೆಯೆ ಎಂಬುದನ್ನು ದೊಡ್ಡ ದೊಡ್ಡ ತತ್ವಜ್ಞಾನಿಗಳು, Great Thinkers, ಯೋಚನೆ ಮಾಡುತ್ತಿರುವ ಸನ್ನಿವೇಶ ಇದು. ಇಂಥ ಒಂದು ಸನ್ನಿವೇಶದಲ್ಲಿ ಬಾಕಿ ದೇಶಗಳು ಪ್ರಗತಿಪರವಾಗಿ ಹೋಗುತ್ತಿವೆ ಎಂದು ಹೇಳುವುದು ಕಷ್ಟ. ರಷ್ಯಾ ದೇಶದಲ್ಲಿ ಮಹಾಕ್ರಾಂತಿಯಾದ ಮೇಲೆ, ಆಸ್ತಿಯ ಮಾಲೀಕತ್ವವೇ ವ್ಯಕ್ತಿಗೆ ಇರಬಾರದೆಂಬುದು ಕಮ್ಯುನಿಸ್ಟರ ಧ್ಯೇಯ ಅಥವಾ ಮೂಲತತ್ವವಾಗಿತ್ತು. ಈ ತತ್ವವನ್ನನುಸರಿಸಿ ಸಮಾಜರಚನೆಮಾಡುವುದಕ್ಕೆ ಹೋಗುವಾಗ ಅನೇಕ ಎಡರು ತೊಡರುಗಳು ಕಾಡುಬಂದವು. ಹಾಗೆ ಕಂಡುಬಂದ ಮೇಲೆ ಮುಖಂಡರು ಆ ನೀತಿಯನ್ನು ಬದಲಾವಣೆಮಾಡಬೇಕಾಗಿಬಂತು. ಒಂದು ಹೊಸ ಆರ್ಥಿಕ ನೀತಿಯನ್ನನುಸರಿಸಿ ರೈತರು ತಮ್ಮ ಭೂಮಿಯನ್ನು ತಾವೇ ಇಟ್ಟುಕೊಳ್ಳುವುದಕ್ಕೆ ಅವಕಾಶಕೊಟ್ಟು ಅವರ ಮೂಲಭೂತ ತತ್ವವನ್ನೇ ಮಾರ್ಪಾಡು ಮಾಡಿಕೊಳ್ಳಬೇಕಾಗಿಬಂತು. ಚೈನಾದೇಶದಲ್ಲಿಯೂ ಕೂಡ ಕ್ರಾಂತಿಯಾಗಿ ಜನತಾರಾಜ್ಯ ಸ್ಥಾಪನೆಯಾದ ಮೇಲೆ New Capitalism ಎಂಬ ಒಂದು ತತ್ವವನ್ನನುಸರಿಸಿ, ವ್ಯಕ್ತಿಗಳಿಗೆ ಮಾಲೀಕತ್ವವಿರಬಹುದು. ಇದಕ್ಕೆ ಅವಕಾಶವಿದೆ ಎಂಬ ತತ್ವದ ಆಧಾರದ ಮೇಲೆ ಸರ್ಕಾರವನ್ನೂ ರಾಜ್ಯಾಂಗವನ್ನೂ ರಚನೆಮಾಡಿಕೊಂಡರು. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸಭೆಯ ಜ್ಞಾಪಕಕ್ಕೆ ತರಲಿಚ್ಛಿಸುತ್ತೇನೆ. ಫ್ರಾನ್ಸ್‌ದೇಶದ ನಾಯಕರಾದ ಸ್ಯಾಲಿನ್ನರು ನಿಧನ ಹೊಂದಿದಾಗ ಅವರ 'ಒಬಿಚ್ಯುಯರಿ'ಯಲ್ಲಿ ಈಗ ನಾಯಕರಾಗಿರುವ ಮೋಲೆಂಕೋವ್‌ರವರು ಒಂದು ಮಾತನ್ನು ಹೇಳಿದ್ದಾರೆ. ಪ್ರಪಂಚದಲ್ಲಿ ಶಾಂತಿ ಇರಬೇಕಾದರೆ, ಶಾಂತಿನೆಲಸಬೇಕಾದರೆ, Capitalism ಮತ್ತು Communism ಎರಡಕ್ಕೂ ಸಾಹಾರ್ದವಿರಬೇಕು. ಇದು ಸಾಧ್ಯವಿದೆ ಎಂಬ ಒಂದು ಗಮನಾರ್ಹವಾದ ಮಾತನ್ನು ಹೇಳಿದ್ದಾರೆ. ಆದರೂ ನಾವೆಲ್ಲರೂ ಯೋಚನೆಮಾಡಬೇಕಾದುದು ಒಂದು ವಿಷಯವಿದೆ. ಕ್ಯಾಪಿಟಲಿಸಂ ಎಷ್ಟುಮಟ್ಟಿಗಿರಬೇಕು, ಸರ್ಕಾರ ಖಾಸಗಿಯ ವರ ಐಶ್ವರ್ಯವನ್ನು ತೆಗೆದುಕೊಳ್ಳಬೇಕ ದರೆ ಹೇಗೆ ತೆಗೆದುಕೊಳ್ಳಬೇಕು, ಹೇಗೆಮಾಡಬೇಕು ಎಂಬುದನ್ನು ಯೋಚನೆಮಾಡದೆ, ಕ್ರಾಂತಿಕಾರಕವಾದ ಬದಲಾವಣೆಮಾಡಬೇಕೆಂದು ಹೇಳುವುದಾದರೆ, ಈ ಕ್ರಾಂತಿಕಾರಕ ಬದಲಾವಣೆಗೆ ನಮ್ಮ ಸಮಾಜ ಒಪ್ಪುತ್ತದೆಯೆ, ಜನತೆ ಒಪ್ಪುತ್ತದೆಯೆ, ಪ್ರಜಾಪ್ರಭುತ್ವದಲ್ಲಿ ಇದು ಸಾಧ್ಯವೆ ಎಂಬುದನ್ನು ನಾವು ಕೂಲಂಕಷವಾಗಿ ಯೋಚನೆ ಮಾಡಬೇಕು. ಕ್ರಾಂತಿಕಾರಕ ಬದಲಾವಣೆ ಹೊರ ದೇಶಗಳಲ್ಲಿ ಆಗಬೇಕಾದರೆ ಪ್ರಜಾ ಪ್ರಭುತ್ವ ತತ್ವದಿಂದ ಆಗಿಲ್ಲ. ಅವಕ್ಕೆ ಪ್ರೊಲೆಟೇರಿಯಟ್ ಡಿಕ್ಟೇಟರ್ ಷಿಪ್ ಎಂದು ಹೇಳುತ್ತಾರೆ. ಅದೇ ಬಂದು ತತ್ವವನ್ನು ಒಪ್ಪಬಹುದಾದರೂ ನಮ್ಮ ಪ್ರಜಾಪ್ರಭುತ್ವದಲ್ಲಿ ಎಷ್ಟು ಮಟ್ಟಿಗೆ ನಿರೀಕ್ಷಣೆ ಮಾಡುತ್ತೇವೋ ಅಷ್ಟುಮಾಡ ಬಹುದು

10 A.M.

ನಾವು ಈ ದಿವಸ ಪ್ರಜಾ ಸರ್ಕಾರದ ತತ್ವಗಳನ್ನು ಆಚರಿಸುತ್ತಿದ್ದೇವೆಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ತಾವು ಈ ಮಾರ್ಗದಲ್ಲಿ ಹೋಗುತ್ತಿರುವುದು ಬಹಳ ನಿಧಾನವಾಗಿರುವುದರಿಂದ ನೀವು ಮಾಡತಕ್ಕ ಕೆಲಸ ಕಾರ್ಯಗಳು ಬಹಳ ನಿಧಾನವಾಗಿ ಆಗುತ್ತಿವೆ. ಆದರೆ, ನಾವು ಮುಖ್ಯವಾಗಿ ಈ ಸಂದರ್ಭದಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ನಾವು ಮಾಡತಕ್ಕ ಪ್ರತಿಯೊಂದು ಕೆಲಸದಲ್ಲೂ ಪ್ರಜೆಗಳ ಆಶೋತ್ತರವೇನಿರುತ್ತದೆ ಎಂಬುದನ್ನು ಅನುಸರಿಸಿಕೊಂಡು ಹೋಗಬೇಕಾಗಿದೆ ತಾವು ಈ maximum ಮತ್ತು minimumಗೆ ಒಂದು ಸೀಲಿಂಗನ್ನು ನಿಗದಿಮಾಡಿಲ್ಲ. ಇದರಿಂದ ಬಹಳ ಕಷ್ಟವಾಗುತ್ತದೆ.

ಒಬ್ಬ ಸದಸ್ಯರು.— ತಾವು ಹಿಂದೆ ಮಾಡುತ್ತಿದ್ದ ಪ್ರಚಾರಗಳನ್ನು ಮರೆತಿದ್ದೀರಾ?

ಶ್ರೀ ಡಿ. ದೇವರಾಜ ಅರಸ್.—ಇಲ್ಲ. ಆದರೆ ಈ ಹಿಂದೆ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮುನ್ನ ಎಷ್ಟೋ ವಿಚಾರಗಳನ್ನು ಹೇಳುತ್ತಿದ್ದೆವು. ಈ ಹಿಂದೆ ಇದೇ ಕಾಂಗ್ರೆಸ್ ಭಾಷಾವಾರು ಪ್ರಾಂತಗಳನ್ನು ರಚನೆ ಮಾಡುತ್ತೇವೆಂದು ಹೇಳಿತ್ತು. ಆದರೆ ಈ ದಿವಸ ಅದರ ಬಗ್ಗೆ ಕಾಂಗ್ರೆಸ್ಸಿನ ಧೋರಣೆಯೇ ಬದಲಾಗುತ್ತಿದೆ. ಹಾಗೆ ಮಾಡಿದರೆ ಆಡಳಿತ ದೃಷ್ಟಿಯಿಂದ ಸರ್ಕಾರ ಈಗ ಸದ್ಯಕ್ಕೆ ಅದು ಸಾಧ್ಯವಿಲ್ಲವೆಂದು ಹೇಳುವಂಥ ಒಂದು ಸಂದರ್ಭ ಬಂದಿದೆಯೆಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಇದೊಂದು ಕ್ರಾಂತಿಕಾರಕ ರೀತಿಯಲ್ಲೇ ಬದಲಾವಣೆಯಾಗಬೇಕಾಗಿದೆಯೆಂಬುದನ್ನು ತಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಹೀಗೆ ತಾವು ಈ ರೀತಿಯಲ್ಲಿ ಇದನ್ನು ಜಾರಿಗೆತರತಕ್ಕ ಬಗ್ಗೆ ಸದಸ್ಯರ ಒಪ್ಪಿಗೆ ಮತ್ತು ಇದಕ್ಕೆ ಸಾರ್ವಜನಿಕರ ಬೆಂಬಲ ಪಡೆಯಲು ಪ್ರಯತ್ನಿಸುವುದಾದರೆ, ಇದರ ಬಗ್ಗೆ ಕೈಎತ್ತುವುದರಲ್ಲಿ ನಾನು ಮೊದಲನೆಯವನಾಗುತ್ತೇನೆ. ಆದರೆ ಈ ದಿವಸ ನಮ್ಮ ಸರ್ಕಾರ ಈ ಜೋಡಿ, ಇನಾಂತಿಗಳನ್ನು ರದ್ದುಪಡಿಸುವ ದಾರಿಯಲ್ಲಿ ಒಂದು ಹೆಜ್ಜೆಯನ್ನು ಮಾತ್ರ ಇಟ್ಟಿದ್ದಾರೆ. ನಮ್ಮ ದೇಶದಲ್ಲಿ ಇನ್ನೂ ಹೆಚ್ಚಿನ ಭೂಸುಧಾರಣೆಗಳಾಗಬೇಕಾಗಿವೆ. ಆದರೆ ನಾವೀಗ ಮುಖ್ಯವಾಗಿ ಮೊದಲು ಗಮನಹಿಡತಕ್ಕ ಬಾಬು ಯಾವುದಾಗಿದೆಯೆಂದರೆ, ಈ "Fragmentation of lands" ವಿಚಾರ. ನಮ್ಮ ದೇಶದಲ್ಲಿ ಈ ಜಮೀನುಗಳು ಸಣ್ಣ ಸಣ್ಣದಾಗಿ ಒಡೆದುಹೋಗಿ ಅವು

ಗಳಿಂದ ಬಹಳ ತೊಂದರೆಗೆ ಈಗ ಅವಕಾಶವಾಗಿದೆ. ಆದರೆ ಹೀಗಾಗದಿರುವಂತೆಮಾಡಿ ಜಮೀನೆಲ್ಲಾ, ಎಂದರೆ ಒಂದೊಂದು ಸಂಸಾರಕ್ಕೆ ಸೇರಿರತಕ್ಕ ಜಮೀನೆಲ್ಲಾ ಒಬ್ಬರ ಕೈಯಲ್ಲೇ ಇರುವಂತೆ ಮಾಡತಕ್ಕದ್ದು ಬಹಳ ಮುಖ್ಯವಾದ ಕೆಲಸ. ಇದನ್ನು ಮಾಡತಕ್ಕ ಬಗ್ಗೆ ಕಾನೂನು ಪ್ರಕಾರ ಏನೇನು ತೊಡಕುಗಳಿವೆ ಎಂಬುದನ್ನು ಆಲೋಚನೆಮಾಡಿ ಇದನ್ನು ಮಾಡಬೇಕಾಗುತ್ತದೆ.

ಆದರೆ ಈಗ ಕೆಲವರು ಈ ಮಸೂದೆಯಲ್ಲಿ ಕೈಬಿಟ್ಟಿರತಕ್ಕ ರಿಲಿಜಿಯಸ್ ಮತ್ತು ಮಠಗಳ ವಿಚಾರವಾಗಿ ಒಂದು ಆಕ್ಷೇಪಣೆಯನ್ನೆತ್ತಿದ್ದಾರೆ. ಆ ಆಕ್ಷೇಪಣೆ ಸಾಧುವಾದದ್ದೇದೇ ನನ್ನ ಭಾವನೆಯೂ ಸಹ. ಆದರೆ ಇದನ್ನು ಮುಂದಕ್ಕೆ ಆಲೋಚನೆ ಮಾಡೋಣವೆಂದು ಸರ್ಕಾರದವರು ತಿಳಿಸಿದ್ದಾರೆ. ಅವರು ಯಾವ ವಿಚಾರವನ್ನೂ ನಿರ್ದಿಷ್ಟವಾಗಿ ಹೇಳಿರುವುದಿಲ್ಲ. ಪ್ರಗತಿದಾಯಕ ಮನೋಭಾವವುಳ್ಳವರೆಲ್ಲಾ ಇದನ್ನು ಬೇಗ ರದ್ದುಪಡಿಸತಕ್ಕ ಬಗ್ಗೆ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಸರ್ಕಾರಕ್ಕೆ ಮನವಿಮಾಡಿಕೊಂಡಿದ್ದಾರೆ.

ಇನ್ನೊಂದು ಮುಖ್ಯ ವಿಚಾರವೇನೆಂದರೆ, ಈ ಇನಾಂದಾರರುಗಳಿಗೆ ಕೊಡತಕ್ಕ ಪರಿಹಾರದ ವಿಚಾರವಾಗಿ ಮಾತನಾಡತ್ತ ಅವರಿಗೆ ಕೊಡಬೇಕೆಂದು ಹೇಳಿರುವುದು ಬಹಳ ಜಾಸ್ತಿಯಾಗಿರುತ್ತದೆಂದು ತಿಳಿಸಿದ್ದಾರೆ. ಈ ಹಿಂದೆ ಇದ್ದ ಕಾಂಗ್ರೆಸ್ ಮಂತ್ರಿಮಂಡಲ 1951ರಲ್ಲಿ ಈ ಬಿಲ್ಲನ್ನು ತಂದಿದ್ದಾಗ ಇನಾಂದಾರರಿಗೆ ಕೊಡತಕ್ಕ ಪರಿಹಾರದ ವಿಚಾರದಲ್ಲಿ ಅವರ ಗ್ರಾಸ್ ಇಕಮ್ಮಿನ 20ರಷ್ಟನ್ನು ಕೊಡಬೇಕೆಂದು ಆ ಹಿಂದಿದ್ದ ಬಿಲ್ಲಿನಲ್ಲಿ ನಮೂದಿಸಲಾಗಿತ್ತು. ಆದರೆ ಈಗ ಇವರು ತಂದಿರುವ ಬಿಲ್ಲಿನಲ್ಲಿ 15 ಅಥವಾ 20 ರಷ್ಟನ್ನು ಕೊಡೋಣವೆಂದು ಸೂಚಿಸಿದ್ದಾರೆ. ಕೆಲವರು ಇದೂ ಸಹ ಜಾಸ್ತಿಯೆಂದೇ ವಾದಮಾಡಿದ್ದಾರೆ. ಆದರೆ ಹೋದ ಸಲ ಬಂದಿದ್ದುದಕ್ಕೂ ಮತ್ತು ಈ ಸಲ ಬಂದಿರುವುದಕ್ಕೂ ಏನು ವ್ಯತ್ಯಾಸವಿದೆಯೆಂಬುದನ್ನು ನಾವೆಲ್ಲರೂ ಆಲೋಚನೆಮಾಡಿ ನೋಡತಕ್ಕದ್ದು ಬಹಳ ಮುಖ್ಯ. ಇದರಲ್ಲಿ ಮತ್ತೊಂದು ಮುಖ್ಯ ವಿಚಾರವಿದೆ ಅದೇನೆಂದರೆ, ಈ ಇನಾಂ ಜಮೀನುಗಳನ್ನು ಯಾರೋ ಒಬ್ಬರು ಈ ದಿವಸ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಬಾಕಿ ಇನಾಂ ಜಮೀನುಗಳೆಲ್ಲಾ 2-3 ಕೈಗಳನ್ನು ದಾಟಿ ಹೋಗಿರುತ್ತವೆ. ಹಾಗೆ ಆ ಇನಾಂದಾರರಿಗೆ ಪರಿಹಾರ ಕೊಡತಕ್ಕದ್ದನ್ನು ವಿಮರ್ಶೆ ಮಾಡುವಾಗ ಇಂಥವರ ವಿಚಾರವನ್ನೂ ಸಹ ಆಲೋಚನೆಮಾಡಬೇಕಾಗಿದೆ. ಹೀಗೆ 2-3 ಕೈ ದಾಟಿಹೋಗಿ ಈ ದಿವಸ ಯಾರು ಯಾರು ಅಂಥ ಇನಾಂ ಜಮೀನುಗಳನ್ನು ಕೊಂಡುಕೊಂಡಿದ್ದರೋ ಅವರಿಗೆ ಈ ಪರಿಹಾರದ್ರವ್ಯ ಕೊಡತಕ್ಕ ಪ್ರಶ್ನೆ ಉದ್ಭವಿಸುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಆಲೋಚಿಸಬೇಕು. ಈಗ ಯಾರೋ ಒಬ್ಬ ವ್ಯಕ್ತಿ ತಾನು ಕಷ್ಟಪಟ್ಟು ಸಂಪಾದಿಸಿದ್ದನ್ನೆಲ್ಲಾ ಹಾಕಿ, ಕೊನೆಗೆ ಸಾಲದೆ ಬಂದ ಅಲ್ಪಸ್ವಲ್ಪ ಹಣಕ್ಕಾಗಿ ತಮ್ಮ ವಾಸದ ಮನೆಗಳನ್ನೂ ಮಾರಾಟಮಾಡಿ ಈ ಇನಾಂ ಜಮೀನುಗಳನ್ನು ಕೊಂಡುಕೊಂಡಿರುತ್ತಾನೆ. ಹಾಗೆ ಆ ಜಮೀನುಗಳನ್ನು 20ಸಾವಿರಕ್ಕೆ ಕೊಂಡು, ಅದಕ್ಕೆ 10ಸಾವಿರ ರೂಪಾಯಿ ಖರ್ಚುಮಾಡಿ ಜೆನ್ನಾಗಿ ಬೆಳೆ ಬೆಳೆಯುವಂಥ ಅನುಕೂಲಗಳನ್ನೆಲ್ಲಾ ಕಲ್ಪಿಸಿಕೊಂಡಿರುತ್ತಾನೆ. ಇಂಥ ಸಂದರ್ಭಗಳಲ್ಲಿ ಇಂಥವರಿಗೂ ಸಹ ಆ ಕಾಂಪೆನ್ಸೇಷನ್ ಕೊಡಬೇಕೆಂಬ ಪ್ರಶ್ನೆ ಏಳುವುದಿಲ್ಲವೆ? ಹಾಗೂ ಒಂದು ವೇಳೆ ಇವರಿಗೂ ಕಾಂಪೆನ್ಸೇಷನ್ ಕೊಡಬಹುದು ಎಂದು ನಿರ್ಧಾರಮಾಡಿದರೂ, ಆಗ ಈತನಿಗೆ ಕೊಡತಕ್ಕದ್ದು ಯಾವ ಆಧಾರದಮೇಲೆ ಎಂಬುದನ್ನು ಆಲೋಚಿಸಿ ನೋಡಬೇಕಾಗಿದೆ. ತಾವು ಗ್ರಾಸ್ ಇಕಮ್ಮಿನಮೇಲೆ ರೆಕ್ಕ ಹಾಕಿ ಅದರ 20ರಷ್ಟನ್ನು ಕೊಡುತ್ತೇವೆಂದು ಹೇಳಿದರೆ, ಆತನಿಗೆ ತಾನು ಇನ್ವೆಸ್ಟ್‌ಮಾಡಿದ 30 ಸಾವಿರದಲ್ಲಿ 10-20 ಸಾವಿರ ನಷ್ಟವಾಗುತ್ತದೆ. ಅಥವಾ ಹಾಗೆ ಇನಾಂ ಜಮೀನುಗಳನ್ನೇನಾದರೂ ಯಾರಾದರೂ ಕೊಂಡುಕೊಂಡರೆ ಅದು ಊರ್ಜಿತವಾಗತಕ್ಕದ್ದಲ್ಲವೆಂದು ಸರ್ಕಾರದವರು ಒಂದು ನೋಟೀಸನ್ನೇನಾದರೂ ಹೊರಡಿಸಿದ್ದರೇನು? ಹೀಗೆ ಈ ದಿವಸ ನಮ್ಮ ಸಮಾಜದ ಕಟ್ಟುನಿಟ್ಟುಗಳ ಪ್ರಕಾರ ಯಾವ ಒಬ್ಬ ವ್ಯಕ್ತಿಯಾಗಲಿ ತನ್ನ ಸ್ವಂತ ದುಡಿಮೆಯಿಂದ ತಾನು ಆಸ್ತಿ ಸಂಪಾದಿಸಿಕೊಂಡಿರಲು ಅವಕಾಶವಿದೆ. ಹೀಗೆ ಅನೇಕರು ಈ ದಿವಸ ಅಂಥ ಇನಾಂ ಜಮೀನುಗಳನ್ನು ಶುದ್ಧ ಕ್ರಯಕ್ಕೆ ಕೊಂಡುಕೊಂಡಿರತಕ್ಕವರೂ ಇರುತ್ತಾರೆಂಬ ಅಂಶವನ್ನೂ ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಂಡು ಕಾನೂನಿನಲ್ಲಿ ಇಂಥವರಿಗೂ ಸಹ ಒಂದು ಅವಕಾಶವನ್ನು ಕಲ್ಪಿಸುವುದು ಸೂಕ್ತವೆಂದು ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಇನ್ನು ತಾವು ಇನಾಂದಾರಿ ಜಮೀನುಗಳನ್ನು ರೈತರಿಗೇ ಕೊಟ್ಟುಬಿಡತಕ್ಕ ಸಂದರ್ಭದಲ್ಲಿ ಅವುಗಳ ಮಾರ್ಕೆಟ್ ಬೆಲೆಯಲ್ಲಿ ಶೇಕಡ 50ರಷ್ಟು ಕೊಡಬೇಕೆಂದು ತಾವು ಇದರಲ್ಲಿ ನಮೂದಿಸಿರುತ್ತೀರಿ. ಇದು ಬಹಳ ಜಾಸ್ತಿಯಾಯಿತೆಂದು ನಾನು ಹೇಳಬೇಕಾಗಿದೆ. ಅಷ್ಟೇ ಅಲ್ಲದೆ, ಹಾಗೆ ಕೊಂಡುಕೊಳ್ಳತಕ್ಕ ಮನುಷ್ಯನು ಆ ಮೊಬಲಗನ್ನು ಐದು ಕಂತುಗಳಲ್ಲಿ ಪಾವತಿಮಾಡಬೇಕೆಂದು ಹೇಳಿದ್ದೀರಿ. ಆದರೆ ಇದು ಬಹಳ ಕಮ್ಮಿ ಅವಧಿಯಾಯಿತು. ತಾವು ಇದನ್ನು ಇನ್ನೂ ಸ್ವಲ್ಪ ಹೆಚ್ಚುಮಾಡಿ, ಆ ರೈತನು ತನ್ನ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಮಾರಾಟಮಾಡಿ, ಹಣವನ್ನು ತೀರಿಸಲು ತಾವು ಆತನಿಗೆ ಕನಿಷ್ಠಪಕ್ಷ 10 ವರ್ಷಗಳಲ್ಲಿ ಪಾವತಿಮಾಡುವಂಥ ಒಂದು ಅವಕಾಶ ಕಲ್ಪಿಸಿಕೊಡಬೇಕೆಂದು ಸೂಚಿಸುತ್ತೇನೆ. ಹೀಗೊಂದು ಅವಕಾಶವನ್ನು ತಾವು ಕಲ್ಪಿಸದಿದ್ದಲ್ಲಿ ಆತನು ಪುನಃ ಸಾಲ ಮಾಡಬೇಕಾಗಿ ಬರುತ್ತದೆ. ಅಂಥ ಸಾಲವನ್ನೆತ್ತಲು ಸ್ವಂತ ಜಾತಿಯಾಗದ ಭೂಮಿಗಳಮೇಲೆ ಸಾಲ ದೊರೆಯುವುದಿಲ್ಲ. ಆಗ ಅವರು ತಮ್ಮ personal liability ಮೇಲೆ ಸಾಲ ತರಬೇಕಾಗುತ್ತದೆ. ಅದಕ್ಕೆ ಅವಕಾಶವಿಲ್ಲ. ಆದುದರಿಂದಲೇ ನಾನಿಗ ತಮ್ಮಲ್ಲಿ ಈ 5 ಕಂತುಗಳಿಗೆ ಬದಲಾಗಿ 10 ಕಂತುಗಳನ್ನು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ತಾವು ಈ ರೀತಿ ಇನ್ನೂ ಅನೇಕ ಬದಲಾವಣೆಗಳನ್ನು ಮಾಡಬೇಕಾಗಿರುವುದರಿಂದ, ಈ ಮಸೂದೆ ಸಲೆಕ್ಟ್ ಸಮಿತಿಯ ಮುಂದೆ ಹೋದಾಗ ಇವುಗಳನ್ನು ಗಮನದಲ್ಲಿಟ್ಟು ಸೂಕ್ತ ರೀತಿಯಲ್ಲಿ ಈ ಬದಲಾವಣೆಗಳನ್ನೆಲ್ಲಾ ಮಾಡಬೇಕೆಂದು ಇಷ್ಟು ವಿಚಾರಗಳನ್ನು ತಿಳಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚೆನ್ನಪಟ್ಟಣ).— ಸ್ವಾಮಿ, ಈ ಇನಾಂ ಅಬಾಲಿಷ್ ಬಿಲ್ಲಿನಮೇಲೆ ಮಾತನಾಡುತ್ತ ಕೆಲವು ಮಿತ್ರರು ಈ ಇನಾಂದಾರರುಗಳೆಲ್ಲಾ ಬಹಳ ಅನ್ಯಾಯಮಾಡಿದ್ದಾರೆ, ಇವರೆಲ್ಲರೂ ಕೆಟ್ಟವರು, ಪಾಪಿಷ್ಠರು ಎನ್ನುವಹಾಗೂ; ಆದರೆ ಆ ರೈತಕುಗಳು ಮಾತ್ರ ಬಹಳ ಸತ್ಯವಂತರು, ಬಹಳ ಒಳ್ಳೆಯವರು ಎನ್ನುವಹಾಗೂ ಒಂದು ಭಾವನೆ ಬರುವಂಥ ರೀತಿಯಲ್ಲಿ ಹೇಳಿದ್ದಾರೆ. ಇನಾಂದಾರರುಗಳಲ್ಲಿ ಅನೇಕರು ಒಳ್ಳೆಯವರೂ ಇರುತ್ತಾರೆ. ಇನಾಂ ಗ್ರಾಮಗಳಲ್ಲಿರತಕ್ಕಂಥ ರೈತರುಗಳನ್ನೆಲ್ಲಾ ಇವರು ಹಾಳುಮಾಡಿದ್ದಾರೆಂದು ಹೇಳಿರ

(ಶ್ರೀ ಎ. ವೆಂಕಟಪ್ಪ.)

ತಕ್ಕಂಥ ವಾದವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಆದರೆ ಎಲ್ಲಾ ಇನಾಂದಾರರೂ ಒಳ್ಳೆಯವರೆಂದಾಗಲೆ ಅಥವಾ ಎಲ್ಲ ರೈತರೂ ಕೆಟ್ಟವರೆಂದಾಗಲಿ ಹೇಳತಕ್ಕದ್ದು ಅಷ್ಟು ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ವಾಸ್ತವಾಂಶಗಳು ಹೀಗಿರುವಾಗ, ಕೆಲವು ಮಾನ್ಯ ಮಿತ್ರರು ಯಾವುದೋ ಒಂದು ತಾಲ್ಲೂಕಿನಲ್ಲಿರತಕ್ಕ ಒಂದು ವಿದ್ಯಮಾನವನ್ನು ತೆಗೆದುಕೊಂಡು, ಅದನ್ನೇ ದೊಡ್ಡದು ಮಾಡಿಕೊಂಡು ಈ ಕಲಿಯುಗದಲ್ಲಿ ಈ ಇನಾಂದಾರರುಗಳೇ ಒಂದು ಪ್ರತ್ಯೇಕ ನಮೂನೆಯನ್ನು ರೈತರಿಗಾಗಿ ಏರ್ಪಾಡು ಮಾಡಿರುತ್ತಾರೇನೋ ಅನ್ನುವ ಹಾಗೆ ಮಾತನಾಡಿದ್ದಾರೆ. ಕೆಲವು ಇನಾಂದಾರರು ತೊಂದರೆ ಕೊಟ್ಟಿರಬಹುದು. ಅದನ್ನು ನಾನು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈಗೇನು ನನ್ನ ಮಿತ್ರರು ಕೆಲವರು ಈ ಇನಾಂದಾರರುಗಳು ಆ ರೈತರಿಗೆ ತೊಂದರೆಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೋ, ಅದಕ್ಕೆ ಸರಿಯಾಗಿ ಆ ರೈತರೂ ಆ ಇನಾಂದಾರರಿಗೂ ಅಷ್ಟೇ ತೊಂದರೆಗಳನ್ನು ಅಥವಾ ಇನ್ನೂ ಸ್ವಲ್ಪ ಹೆಚ್ಚಿಗೆ ತೊಂದರೆಗಳನ್ನೂ ಕೊಟ್ಟಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಆದುದರಿಂದ ನಾವು ಇಂತಹ ಕೆಲವು ಸಂದರ್ಭಗಳನ್ನು ವಾಸ್ತವಿಸಿನಲ್ಲಿಟ್ಟುಕೊಂಡು ಮಾತನಾಡುವುದಕ್ಕೆ ಹೋದರೆ ಅದು ತಪ್ಪಾಗುತ್ತದೆಂದು ನನಗೆನಿಸುತ್ತದೆ. ತಮ್ಮಲ್ಲಿ ಅನೇಕರಿಗೆ ಇಂಥ ವಿಚಾರಗಳೂ ಗೊತ್ತಿರಬಹುದು. ಈಗಾಗಲೆ ಶ್ರೀ ಸಿದ್ದಪ್ಪನವರು ಆ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಈ ಜಮೀನು ಮಾಡತಕ್ಕ ರೈತರು ಇನಾಂದಾರರನ್ನು ಹೇಗೆ ತೊಂದರೆಪಡಿಸಿದ್ದಾರೆಂಬುದಕ್ಕೆ ತಮ್ಮಲ್ಲನೇಕರಿಗೆ ತಿಳಿದಿರುವಂತೆ, ಶ್ರೀಮಾನ್ ಮಾಗಡಿ ಕೃಷ್ಣಮೂರ್ತಿಯವರ ಉದಾಹರಣೆ ಸಾಕು. ಮತ್ತೊಂದು ಉದಾಹರಣೆ ಹೇಳುವುದಾದರೆ, ಒಬ್ಬ ಹೈಕೋರ್ಟು ನ್ಯಾಯಾಧೀಶರಾಗಿದ್ದಂಥವರು ಅವರು ರಿಟೈರಾದಮೇಲೆ ತಮ್ಮ ಇನಾಮ್ ಲ್ಯಾಂಡ್ಸ್ ಗಳನ್ನು ಉಳಿಸಿಕೊಂಡು ಸುಖವಾಗಿರುವುದಕ್ಕೆ ಬಂದರೆ ಅಂಥವರೂ ಕೂಡ ಹಳ್ಳಿಯಲ್ಲಿರದಂತೆ ರೈತರು ಕಿರುಕುಳ ಕೊಟ್ಟಿರುವ ನಿದರ್ಶನವಿದೆ. ಈ ವಿಚಾರಗಳೆಲ್ಲಿ ಈ ಸರ್ಕಾರದವರಿಗೆ ಗೊತ್ತಿದೆಯೋ, ಇಲ್ಲವೋ ನನಗೆ ತಿಳಿಯದು. ಅಂತೂ ಹೀಗೆ ಒಂದೇ ಪರವಾದಮಾಡುತ್ತಿರುವುದು ಸರಿಯಲ್ಲ. ಆ ಇನಾಂ ಗ್ರಾಮಗಳಲ್ಲೆಲ್ಲಾ ರೈತಾಪಿ ಜನರು ಇನ್ನೂ ನಾಶದಲ್ಲೇ ಹೊರಳುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಹಾಗೆ ಎಲ್ಲಾ ಗ್ರಾಮಗಳಲ್ಲೂ ಇಲ್ಲ. ಇದ್ದರೆ ಎಲ್ಲೊ ಒಂದೆರಡು ಹಾಗೆ ಇರಬಹುದು. ಸರ್ಕಾರದವರು ಆ ಸರ್ಕಾರಿ ಗ್ರಾಮಗಳಲ್ಲಿರತಕ್ಕ ಜನರಿಗೆ ಏನೇನು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೋ ಅದಕ್ಕಿಂತಲೂ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಟ್ಟಿರತಕ್ಕಂಥಾ ಇನಾಂ ಗ್ರಾಮಗಳೂ ಸಹ ಇಲ್ಲದೆ ಇಲ್ಲ. ಶ್ರೀ ಗರುಡಾಚಾರ್ ಅವರು ಈ ದಿವಸ ಸತ್ತು ಸ್ವರ್ಗಸ್ಥರಾಗಿದ್ದಾರೆ. ಆದರೆ ಅವರು ರೈತರಿಗಾಗಿ ಮಾಡಿರತಕ್ಕಂಥ ಉಪಕಾರಗಳನ್ನು ನಾವು ಮರೆತರೆ ಬಹಳ ತಪ್ಪಾಗುತ್ತದೆ. ಅವರು ತಮ್ಮ ಇನಾಂ ಗ್ರಾಮದಲ್ಲಿರತಕ್ಕ ರೈತರಿಗೆ ಅನೇಕ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಅವರು ಪ್ರತಿ ಯೊಂದು ಯುಗಾದಿ ಹಬ್ಬದಲ್ಲಿಯೂ ತಮ್ಮ ರೈತರಿಗೆ ಹೊಸಹೊಸ ಬಟ್ಟೆಗಳನು ತೆಗೆದುಕೊಟ್ಟಿದ್ದಾರೆ, ರೈತನಿಗೆ ದನಗಳನ್ನು ಕೊಡಿಸಿ ಸಹಾಯ ಮಾಡಿದ್ದಾರೆ, ಅವರಿಗೆ ಮನೆ ಇಲ್ಲದಿದ್ದರೆ. ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ, ಹೀಗೆ ಎಷ್ಟೋ ಉಪಕಾರಗಳನ್ನು ಮಾಡಿದ್ದಾರೆ. ಇಂಥಾ ಉಪಕಾರಗಳನ್ನೆಲ್ಲಾ ಯಾವ ಸರ್ಕಾರದವರು ಮಾಡಿದ್ದಾರೆಂದು ನಾನು ಕೇಳಬೇಕಾಗಿದೆ. ಆದರೆ ನನಗೆ ಗೊತ್ತಿರುವಮಟ್ಟಿಗೂ ಅಂಥಾ ಅನುಕೂಲಗಳನ್ನು ಯಾವ ಸರ್ಕಾರವೂ ಮಾಡಿರುವಂತೆ ಕಂಡು ಬರಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನಾವು ಅವರಿಗೆ ಫ್ರೀಡಂ ತಂದುಕೊಟ್ಟಿದ್ದೇವೆ. ಮತ್ತು ಈಗ ಅವರಿಗೇ ಭೂ ವಾಲೀಕತ್ವವನ್ನು ಕೊಡಿಸಬೇಕೆಂದಿದ್ದೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಅಂಥ ಜನಪ್ರಿಯರಾದ ಜೋಡಿದಾರರು ನಮ್ಮಲ್ಲಿ ಎಷ್ಟು ಜನರಿರುತ್ತಾರೆಂಬುದಕ್ಕೆ ಒಂದೆರಡು ನಿದರ್ಶನಗಳನ್ನು ತಾವು ಕೊಡಬಲ್ಲರಾ ?

ಶ್ರೀ ಎ. ವೆಂಕಟಪ್ಪ —ನನ್ನ ತಂದೆಯವರ ವಿಷಯವನ್ನೇ ತೆಗೆದುಕೊಳ್ಳಿ; ಎಷ್ಟು ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಇನಾಂದಾರರಿಗೆ ತೊಂದರೆ ಕೊಟ್ಟಿರತಕ್ಕಂಥ ರೈತರೂ ಇದ್ದಾರೆ, ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

ತಾವು ಹೇಳತಕ್ಕದ್ದಕ್ಕೂ, ತಮ್ಮ ಮಾತಿಗೂ ಒಂದು ಬೆಲೆ ಯಿರಬೇಡವೇ ? ಏನು ಮಹತ್ತರವಾದ ಉಪಕಾರವನ್ನು ಸರ್ಕಾರದವರು ಅವರಿಗೆ ಮಾಡಿರುವುದು? ನಿಜವಾಗಿಯೂ ಅವರಿಗೆ ಬಹಳ ಅನ್ಯಾಯವಾಗಿದೆ ಜೋಡಿಗಳನ್ನು, ನಿಶ್ಯತಿಕ್ಕು ಅವರಿಗೆ, ಊಟಮಾಡಿಸ ಅವರಿಗೆ—ಇಂಥಾ ಜನರಿಗೆಲ್ಲಾ ಕೊಟ್ಟುಬಿಟ್ಟಿದ್ದಾರೆ ಎಂದು ಹೇಳಿದರು ಇರಬಹುದು, ಅದರೂ ಇವತ್ತಿನದಿವಸ ನಾವಿರುವ ಸ್ಥಳವೇನು, ನಾವು ಈ ವಿಚಾರಗಳಲ್ಲಿ ಯಾವ ಧೋರಣೆತಾಳಬೇಕು, ಅವರಿಗೆ ನಿಜವಾಗಿಯೂ ಏಕೆ ಕೊಟ್ಟರು ಎಂಬುದನ್ನು ಸ್ವಲ್ಪವೂ ಯೋಚನೆಮಾಡುವುದುಬೇಡವೇ! ಇವತ್ತಿನ ದಿವಸ ಈ ಸರ್ಕಾರದವರೇ ಆ ರೀತಿಯಾಗಿ ಅನೇಕರಿಗೆ ಕೊಟ್ಟಿಲ್ಲವೇ, ಕೊಡುತ್ತಿಲ್ಲವೇ! Political sufferers ಎಂದೇಕೆ ಜಮೀನುಗಳು ಮಂತಾದುವನ್ನು ಕೊಡುತ್ತಿದ್ದೀರಿ ? ಅವರು ದೇಶಕ್ಕಾಗಿ ದುಡಿದರೆಂದು ಅವರ ಮನೆಯವರಿಗೆ ನೂರಾರು ಎಕರಗಳನ್ನು ಕೊಟ್ಟಿಲ್ಲವೇ! ಅದೇ ರೀತಿ ಹಿಂದೆ ಜೋಡಿದಾರರ ಮತ್ತು ಇನಾಂದಾರರ ಮನೆತನದವರು ಮಾಡಿರತಕ್ಕ ಯಾವುದೋ ಒಂದು ಸೇವೆಯನ್ನು ನಾವಿಂದು ಸರಿಯಾಗಿ ಅಳೆಯುವುದಕ್ಕೆ ಬಹುಶಃ ಶಕ್ತರಲ್ಲ. ಅವರು ಅವತ್ತೇನು ಸೇವೆ ಮಾಡಿದರೋ, ಅಂದಿಗೆ ಆ ಸೇವೆಯೇ ದೊಡ್ಡದಾಗಿರಬಹುದು. ಆ ಸೇವೆಯ ಕುರುಹಾಗಿ ಆ ರಾಜ ಮಹಾರಾಜರುಗಳು ಅವುಗಳನ್ನು ಕೊಟ್ಟಿರಬಹುದು. ಕರ್ನಲ್ ಕೃಷ್ಣಮೂರ್ತಿಯವರಿಗೆ ಇನಾಂತಿಯನ್ನೇಕೆ ಕೊಟ್ಟರೆಂದು ಒಂದು ಉದಾಹರಣೆಯನ್ನು ಹೇಳುತ್ತೇನೆ: ವೇದಾಧ್ಯಯನ ಮಾಡುತ್ತಾ ನೂರಾರು ಜನ ವಿದ್ಯಾರ್ಥಿಗಳನ್ನು ಮನೆಯಲ್ಲಿಟ್ಟುಕೊಂಡು ಅವರೇ ಪಾಠಹೇಳಿಕೊಡುತ್ತಿದ್ದರು. ಆ ಶಕ್ತಿ ಅವರಲ್ಲದೆಯೆಂದು ಕಂಡು, ಅವರು ಆ ರೀತಿಯಾಗಿ ನಡೆಸಿಕೊಂಡು ಹೋಗುವುದು ದೇಶದ ಕಲ್ಯಾಣಕ್ಕೆಂದು ಇನಾಂತಿಯನ್ನು ಕೊಟ್ಟರು. ಇವತ್ತಿನ ದಿವಸ ಆ ಕೆಲಸ ನಡೆಯದಿರಬಹುದು. ಅಂದ ಮಾತ್ರಕ್ಕೆ ಆ ಕಾಲದಲ್ಲಿ ಅವರು ಮಾಡುತ್ತಿದ್ದಂಥ ಸೇವೆಯನ್ನು ನಾವಿಂದು ಕ್ಷುಲ್ಲಕವಾಗಿ ಪರಿಗಣಿಸುವುದು ಬಹಳ ಅನ್ಯಾಯ. ನಾನೇನೂ ಜೋಡಿಗ್ರಾಮಗಳನ್ನು ತೆಗೆದುಕೊಳ್ಳಬೇಡಿ ಎಂದು ಹೇಳುತ್ತಿಲ್ಲ. ಅದಕ್ಕೆ ಕಾಲ ಬಂದಿದೆ, ನಿಜ. ಆದರೆ ಪ್ರದಕ್ಕೂ ಒಂದು ರೀತಿ ನೀತಿ ಬೇಕು.

ಸ್ವಾಮಿ, ತಮ್ಮ ಕಾನೂನಿನಲ್ಲಿ ಈಗ ತಾವು ತಂದಿರತಕ್ಕ ರೀತಿಯಲ್ಲಿ ಇನಾಂದಾರನಾದವನು ತನಗೆ ಉಳಿಸಿ

ಕೊಳ್ಳಬಹುದಾದ ಖಾಸ್ ಜಮೀನು, ಅಂದರೆ ಸ್ವಂತ ವಾಗಿ ಮಾಡುತ್ತಿದ್ದ ಜಮೀನು ಅದನ್ನು ಅವನ ಹೆಸ ರಿಗೆ ರಿಜಿಸ್ಟರುಮಾಡಲು ಅವಕ್ಕೆ 25 ವರ್ಷಗಳ ಕಂದಾಯ ಕೊಟ್ಟಬೇಕೆಂದು ಮಾಡಿದ್ದೀರಿ. ಇದಕ್ಕೇನು ಅವಶ ಕತೆ ಯಿದೆಯೋ ಅಥವಾ ಅವರಲ್ಲೇನು ನ್ಯಾಯ ವಿದೆಯೋ ನನಗಂತೂ ಗೊತ್ತಿಲ್ಲ. ಈಗತಾನೆ ಶ್ರೀಮಾನ್ ದೇವರಾಜ ಅರಸ್ ಅವರು ಹೇಳಿದಹಾಗೆ ಇವತ್ತಿನ ದಿವಸ ಇರತಕ್ಕ ಅನೇಕ ಜೋಡಿದಾರರು ಮತ್ತು ಇನಾಂದಾರರುಗಳು ತಲೆತಲಾಂತರದಿಂದಲೂ ಆ ಜೋಡಿ, ಇನಾಂತಿಗಳನ್ನು ಅನುಭವಿಸಿಕೊಂಡು ಬಂದ ವರಲ್ಲ. ಮೊದಲಿನ ಜೋಡಿ ಇನಾಂದಾರರುಗಳಿಂದ ಬೇಕಾದಷ್ಟು ಹಣಕೊಟ್ಟು ಕೊಂಡುಕೊಂಡು ಆಮೇಲೆ ಅದನ್ನು ಅಭಿವೃದ್ಧಿಸ್ಥಿತಿಗೆ ತರುವುದಕ್ಕೆ ಏನೇನು ಬೇಕೋ ಅದಕ್ಕಾಗಿ ಖರ್ಚುಮಾಡಿರುವವರನ್ನೂ ತಾವಿಲ್ಲಿ compensation ಕೊಡುವಾಗ ಪ್ರತ್ಯೇಕವಾಗಿ ಗಣನೆಗೆ ತೆಗೆದುಕೊಂಡಿಲ್ಲ. ಅವರುಕೊಟ್ಟ ರ ತಕ್ಕ ಖರೀದಿ, ಮತ್ತು ಅದನ್ನು ಉತ್ತಮಪಡಿಸಿದ್ದ ಕ್ಕಾಗಿ ಆಗಿರಬಹುದಾದ ಖರ್ಚು—ಅದಕ್ಕೇನಾದರೂ ಕೊಡಬೇಕೇ ಬೇಡವೇ? ಇವತ್ತಿನದಿವಸ ಆ ಜಮೀನು ಗಳಿಗೆ ಹೆಚ್ಚಿಗೆ ಬೆಲೆ ಬಂದರೆ ಅದಕ್ಕೆ ಅದನ್ನು ಅಭಿ ವೃದ್ಧಿ ಪಡಿಸಿದ ಇನಾಂದಾರನೇ ಕಾರಣ. ಯಾವ ರೈತನಿಗೆ,—ಖರೀದಿ ರೈತನಿಗೇ ಆಗಲೀ, ಕ್ರಾಸೀ ಖರೀದಿ ರೈತನಿಗೇ ಆಗಲಿ—ಮಾಡುತ್ತೀರೋ ಅವನಿಗೇ ಬಿಟ್ಟುಕೊಡುತ್ತೀರಲ್ಲ. ಹಾಗೆ ಕೊಡುವಾಗ ನೀವು ಯಾವ ಬೆಲೆ ಅವನಿಂದ ತಗೆದುಕೊಳ್ಳುತ್ತೀರಿ? ಈಗ ಹಾಲಿ ಯಾವ ಬೆಲೆಯಿದೆಯೋ ಅದನ್ನೇ ನೋಡಿ fix ಮಾಡ ಬೇಕೆಂದು ಹೇಳಿದ್ದೀರಿ. ಆಷ್ಟು ಹೆಚ್ಚಿನ ಬೆಲೆ ಬರುವುದಕ್ಕೆ ಯಾರು ಕಾರಣರೋ ಅವರಿಗೆ ನ್ಯಾಯ ಮಾಡಿದ್ದೀರಾ? ಅದನ್ನು ಮಾಡುವುದು ಬೇಡವೇ? ಆ ಹಣಕ್ಕೆ ಅವರು ಸ್ವಲ್ಪಮಟ್ಟಿಗಾದರೂ ಅರ್ಹರಲ್ಲವೇ ಎಂಬುದನ್ನು ತಾವು ಯೋಚನೆ ಮಾಡಬೇಕು.

ಆಮೇಲೆ basic annual sum ಎಂಬುದನ್ನು ಗೊತ್ತುಮಾಡಬೇಕೆಂಬುದಕ್ಕೆ. ಇನಾಂ ಕೊಟ್ಟಾಗ ಯಾವ ಕಂದಾಯ ಗೊತ್ತುಮಾಡಿದರೋ ಅದರ 1½ ಭಾಗದ ಮೇಲೆ, ಅದು ಸಾವಿರರೂಪಾಯಿಗಳ ಒಳಗೆ ಇದ್ದರೆ 20ರಷ್ಟು ಕೊಟ್ಟರೆ ಸಾಕ ಎಂದು ಹೇಳಿದ್ದೀರಿ. ಇದು ನ್ಯಾಯವೇ? ಇದರಲ್ಲಿ ಅವನು ಕೊಡತಕ್ಕ quit rent ಎಷ್ಟಿದೆ, ಏನು ಎಂಬುದನ್ನು ಯೋಚಿ ನೆಯೇ ಮಾಡಲಿಲ್ಲವೇ? ಅಥವಾ ಯೋಚನೆಮಾಡಿ, ಈ ರೀತಿ ಮಾಡಿದರೆ ಅವನಿಗೆ ಸಾಕಾದಷ್ಟು ಅನುಕೂಲ ವಾಗುತ್ತದೆ ಎಂದು ಅಂದುಕೊಂಡಿದ್ದೀರೋ ಏನೋ ನನಗೆ ಗೊತ್ತಿಲ್ಲ. 170 ರೂಪಾಯಿಗಳ ಬೇರೀಜು ಇರತಕ್ಕ ಗ್ರಾಮದಲ್ಲಿ 50 ರೂಪಾಯಿಗಳ quit rent ಪಜಾಮಾಡಿಕೊಂಡು ಉಳಿದ 120 ರೂಪಾಯಿಗಳ 20 ರಷ್ಟು ಎಂದರೆ 2,400 ರೂಪಾಯಿಗಳನ್ನು ಕೊಟ್ಟು ಬಿಟ್ಟರೆ ಅವನು ಜೀವನ ಹೇಗೆ ನಡೆಸಬೇಕೆಂಬುದನ್ನು ಯೋಚನೆ ಮಾಡಬೇಕು. ಏನಾವರೂ ಬೇರೆ ರೀತಿ ಅನುಕೂಲವಾಗಿರತಕ್ಕವರ ಪಾಡು ಹೇಗಾದರೂ ಇರಲಿ; ಬೇರೆ ಯಾವ ವಿಧವಲ್ಲೂ ಜೀವನಕ್ಕೆ ಮಾರ್ಗವಿಲ್ಲದೆ ಇದನ್ನೇ ನಂಬಿಕೊಂಡಿರುವವರ ಗತಿ ಏನು? ತಾವು ಕಷ್ಟದಲ್ಲಿರುವ ರೈತರನ್ನು ಕಾಪಾಡುತ್ತೇವೆಂದು ಹೋಗಿ ಇನ್ನು ಕೆಲವು ಜನರನ್ನು ಕಷ್ಟಕ್ಕೆ ಸಿಕ್ಕಿಸುವುದು ನ್ಯಾಯವೇ? ಅದರಲ್ಲೂ ವಿಧವೆಯರು, ವೈನರ್ ಮಕ್ಕಳು ಎಷ್ಟೋ ಜನರಿರುತ್ತಾರೆ. ಅವರು ತಾವು ಕೊಡುವ ಶೇಖಡ 2½ ರಂತೆ ಬಡ್ಡಿ ತೆಗೆದುಕೊಂಡು ಜೀವನ ಮಾಡುವುದಕ್ಕಾಗುತ್ತದೆಯೇ? ಇನ್ನು ಯಾವ ಉತ್ಪತ್ತಿ ಈಗ ಬರುತ್ತಿದೆಯೋ ಆ ಉತ್ಪತ್ತಿ ಗಳನ್ನೆಲ್ಲಾ ಲೆಕ್ಕಹಾಕಿ, ಅದರಮೇಲೆ compensation ಎಷ್ಟೆಷ್ಟು ಕೊಡಬೇಕೆಂಬುದನ್ನು ನಿರ್ಧರಿಸಬೇಕಾದದ್ದು ನ್ಯಾಯ. ಹೀಗೆ ಬಹಳ ಮಟ್ಟಿಗೆ ಕಾರಣಾಂತರದಿಂದ— ಯಾವ ಕಾರಣವೋ ನನಗೀಗಬೇಡ—ಇವತ್ತಿನ ನಂಬಿ ಕೊಂಡು ಬಂದಿರತಕ್ಕ ಜನರಿಗೆ ಈ ಬಿಲ್ಲು ಬಹಳ ಕಷ್ಟ ತರುತ್ತದೆ. ಅವರಲ್ಲೂ ಜಮೀನಿನಮೇಲೆ ಹಕ್ಕಿನ ಸಂಪಾದನೆ ಮಾಡಬೇಕೆಂದು ಕೆಲವರು ಪ್ರಯತ್ನ ಮಾಡಿದ್ದೇ ತಪ್ಪೇ? ಇವೊತ್ತಿನ ದಿವಸ ಅಲ್ಲೇ ಎಲ್ಲರ ಕಣ್ಣೂ ಜಮೀನ್ದಾರನಮೇಲೆಯೇ! ಈಗಲೂ ನಮ್ಮ ದೇಶದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಪಾ ದನೆ ಮಾಡುವ ಯಾವ ಜಮೀನ್ದಾರರೂ ಇಲ್ಲವೆಂದು ಹೇಳಿದರೂ ತಪ್ಪಲ್ಲ. ಅದೇ ಬೇರೆ ಕೈಗಾರಿಕೆಗಳ ನ್ನಿಟ್ಟುಕೊಂಡಿರುವವರು ಎಷ್ಟು ಸಂಪಾದನೆ ಮಾಡು ತ್ತಾರೆ! ಈ ದೊಡ್ಡ ಸಿಟಿಯಲ್ಲಿ ವ್ಯಾಪಾರಗಾರರು ಎಷ್ಟು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ! ವರ್ಷ ವೆಲ್ಲಾ ಗೈದು ಜಮೀನ್ದಾರನ ಬೆಳೆದು ನಿಮ್ಮೆಲ್ಲರಿಗೂ ಊಟಮಾಡಿ ಎಂದು ಹಂಚಿಕೆಡುತ್ತಾನಲ್ಲಾ ಅದ ಕ್ಕಾಗಿ ಅವನಮೇಲೆ 'ವಾರಿಸು ಕಣ್ಣು ಹೋತನಮೇಲೆ' ಎನ್ನುವಹಾಗೆ, ನೀವು ನಿಮ್ಮ ದರ್ಪವನ್ನು ನಡೆಸುತ್ತಿ ದ್ದೀರಿ! ಅವನ ಜಮೀನನ್ನು ಎಲ್ಲರಿಗೂ ಹಂಚುತ್ತೇವೆ ಎಂದು ಹೇಳುತ್ತಿದ್ದೀರಿ! ಇದರಿಂದ ಒಳ್ಳೆಯದಾಗು ತ್ತದೋ ಕೆಟ್ಟದಾಗುತ್ತದೋ ನೀವೇ ನೋಡುವಿರಿ. ಅನೇಕರಿಗೆ ಈಗ ನೀವು ಎಷ್ಟೋ ಜಮೀನುಗಳನ್ನು ಕೊಟ್ಟಿದ್ದೀರಿ. ಅದರಿಂದ ಎಷ್ಟೋಜನ ಜೀವನ ಮಾಡು ತ್ತಿದ್ದಾರೆಂಬುದನ್ನು ನೀನೇ ನೋಡುತ್ತಿದ್ದೀರಿ! ಅವರಿಗೆ ಕೊಟ್ಟಾಕ್ಷಣ ಉದ್ಧಾರ ವಾಗುತ್ತದೆಯೇ? ಹಿಂದೆಯೂ ಅವರಿಗೆ ಎಷ್ಟೋ ಅನುಕೂಲಗಳನ್ನು ಮಾಡಿಕೊಟ್ಟಿರಿ, ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿದಿರಿ, ಅದೆಲ್ಲಾ ಏನಾಯಿತು! ಏಕೆ ಜನರು ಹಳ್ಳಿ ಹೋಗಿ ಜೀವನ ಮಾಡ ಲಲ್ಲ? ಸುಲಭವಾಗಿ ಇಲ್ಲಿ ಪಟ್ಟಣಕ್ಕೆ ಬಂದು ಜೀವನ ಹೊರೆಯೋಣವೆನ್ನುವ ಮನೋಭಾವ ಬೆಳೆಸಿಟ್ಟು ಈಗ ಯಾರು ಕಷ್ಟಪಟ್ಟು ದುಡಿಯುತ್ತ, ಜಮೀನನ್ನೇ ನಂಬಿಕೊಂಡಿದ್ದಾರೋ ಅವರಿಂದ ಕಿತ್ತುಕೊಳ್ಳಿ, ಅವರ ಭೂಮಿ ಆಸ್ತಿ ಸುಲಭವಾಗಿ ಕೈಗೆ ಸಿಕ್ಕುತ್ತದಲ್ಲಾ, ಎಂದು ಹೇಳುವುದು ನ್ಯಾಯವೇ?

ಆದರೆ, ನಾವೇನೋ ಈಗ ಒಂದು ಸುಧಾರಣೆ ಯನ್ನು ಮಾಡಬೇಕೆಂದು ಹೊರಟಿದ್ದೇವೆ. ಅದನ್ನು ಮಾಡುವುದು ಬೇಡವೆಂದು ನಾನು ಹೇಳುವುದಿಲ್ಲ. ಅನೇಕ ಜೋಡಿದಾರರು ಸದ್ಯ ಜೋಡಿಯನ್ನು ಕಮ್ಮ ಕ್ಕೆಯಿಂದ ತಪ್ಪಿಸಿ ದುಡ್ಡನ್ನುಕೊಟ್ಟರೆ ಸಾಕು ಎಂದು ಹೇಳುತ್ತಿರುವುದು ನಿಜ. ಆದ್ದರಿಂದ ಅನ್ಯಾಯ ಮಾಡ ಬೇಡಿ. ಯಾರಿಗೋ ಹೊಚ್ಚಿಗೆ ಹಾಕುತ್ತೇವೆಂದು ಹೋಗಿ ಇನ್ನು ಕೆಲವರನ್ನು ಉಪವಾಸ ಬೀಳುವಂತೆ ಮಾಡಬೇಡಿ ಎಂದು ಮಾತ್ರ ನಾನು ಹೇಳುತ್ತಿದ್ದೇನೆ.

ಸ್ವಾಮಿ, ಇನ್ನು ತಾವು ಆ ಜಮೀನಿನ ಮೇಲಿದ್ದ ರೈತರಿಗೆ ಹಾಕಿರತಕ್ಕಹೊರೆ ಬಹಳ ಅನ್ಯಾಯವಾದದ್ದು. ತಾವು ಆ ಬಡರೈತನಿಗೆ, ಯಾರನ್ನೋ ಹಿಡಿದು ವಸೂಲು ಮಾಡಿದ ಆ ಜಮೀನನ್ನು ಸುಮ್ಮನೆಕೊಟ್ಟಿದ್ದರೆ ನನಗೆ ಸಂತೋಷವಾಗುತ್ತಿತ್ತು. ಅವರಿಂದ ಈಗಿನ ಬೆಲೆಯೇ ನಿವೆಯೋ ಅದನ್ನು ನೋಡಿಕೊಂಡು ಅದರ ಅರ್ಧ ಬೆಲೆಗೆ ಕೆಲವರಿಗೂ, ಅದರ ಮುಕ್ಕಾಲು ಬೆಲೆಗೆ ಕೆಲವರಿಗೂ ಕೊಡಬೇಕೆಂದು ಮಾಡಿದ್ದೀರಿ. ಇದರಿಂದ ತಾವು ಅವ ರಿಗೆ ಏನು ಉಪಕಾರ ಮಾಡಿದಂತಾಯಿತು? ಈಗ ನೀವು ಮಾಡಿರುವುದನ್ನು ನೋಡಿದರೆ, ರೈತರನ್ನು ಉದ್ಧಾರ ಮಾಡಬೇಕೆಂಬ ದೃಷ್ಟಿ ತಮಗಿದೆಯೆಂದು ಹೇರು

(ಶ್ರೀ ವಿ. ವೆಂಕಟಪ್ಪ)

ವುದಿಲ್ಲ. ಬಹಳ ದಿವಸಗಳಿಂದ ಜಮೀನು ಮಾಡುತ್ತಿದ್ದಂ ಖದೀಂ ಟಿನೆಂಟ್‌ಗಳಿಗೆ ಮುಫತ್ತಾಗಿ ಎಂತಲೂ, ಸ್ವಲ್ಪ ದಿವಸದಿಂದ ಮಾಡುತ್ತಿದ್ದವರಿಗೆ ಹೆಚ್ಚಿಗೆ ಕೊಡಬೇಕೆಂ ತಲೂ ಮಾಡಿದ್ದೀರಿ. ಏಕೆ ಹೀಗೆ ಮಾಡಿದ್ದೀರೋ ಅರ್ಥವಾಗುವುದಿಲ್ಲ. ಎಲ್ಲರಿಗೂ ಒಂದೇ ರೀತಿ ಗೊತ್ತು ಮಾಡಿ ಏಕೆ continue ಮಾಡುತ್ತಿಲ್ಲ! ಖದೀಂ ಟಿನೆಂಟಿಗೊಂದು ರೀತಿ, ಆರು ವರ್ಷದಿಂದ ಮಾಡುತ್ತಿದ್ದವನಿಗೊಂದು ರೀತಿ, ಎಂಟು ವರ್ಷದಿಂದ ಮಾಡುತ್ತಿದ್ದವನಿಗೊಂದು ರೀತಿ, ಹೀಗೆ ಒಬ್ಬೊಬ್ಬರಿಗೂ ವ್ಯತ್ಯಾಸ ಮಾಡುವುದಕ್ಕೆ ಕಾರಣವೇನು? ಒಬ್ಬನು ಅನೇಕ ದಿವಸಗಳಿಂದ ಅದೇ ಊರಿನಲ್ಲದ್ದು ಆ ಜಮೀನನ್ನು ಮಾಡಿಕೊಂಡು ಬರುತ್ತಿರಬಹುದು. ಇನ್ನೊಬ್ಬ ಏನೂ ಜೀವನಕ್ಕೇ ಮಾರ್ಗವಿಲ್ಲದೆ ಹೊಸದಾಗಿ ಕೆಲವು ದಿನಗಳಿಂದ ಜಮೀನಿನ ಮೇಲೆ ಬಂದಿರಬಹುದು. ಇದಕ್ಕೇಕೆ ವ್ಯತ್ಯಾಸ?

ಶ್ರೀ ಕಡಿದಾಳ್ ಮಂಜಪ್ಪ.—ಕಾರಣ ಆಮೇಲೆ ಹೇಳುತ್ತೇನೆ

ಶ್ರೀ ವಿ. ವೆಂಕಟಪ್ಪ.—ನೀವು ಏನೋ ಕಾರಣ ಹೇಳಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ನಮಂಜನವಾದ ಕಾರಣವನ್ನೇ.

ಶ್ರೀ ವಿ. ವೆಂಕಟಪ್ಪ.—ನೀವೇನು ಕಾರಣ ಹೇಳುತ್ತೀರೆಂಬುದು ನನಗೆ ಗೊತ್ತಿದೆ.

ಆಮೇಲೆ ಈ ವಿಷಯದಲ್ಲಿ ತಾವು ಯಾವೆ ಯಾವ ಬಾಬುಗಳನ್ನು ಬಿಟ್ಟುಬಿಟ್ಟಿದ್ದೀರೋ ಆ ಬಾಬುಗಳಿಗೆ ತಾವು compensation ಕೊಡದ ಪಕ್ಷಕ್ಕೆ, ಇದು ಕೊನೆಗೆ ಕೋರ್ಟುಗಳಿಗೆ ಹೋಗುತ್ತದೆಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ, ಕಾನೂನು ಪ್ರಕಾರ ಯಾವ ಯಾವ ಬಾಬುಗಳಿಂದ ಅವನಿಗೆ ಆತ್ಪತಿ ಬರುತ್ತಿತ್ತೋ ಅವುಗಳೆಲ್ಲವನ್ನೂ ನೀವು ಸೇರಿಸಿಕೊಳ್ಳಬೇಕಾಗಿದೆ ಆದ್ದರಿಂದ ಈಗಲೇ ಸರಿಯಾಗಿ ಯೋಚನೆಮಾಡಿ ಅವೆಲ್ಲವನ್ನೂ ಸೇರಿಸಿಕೊಂಡು compensation ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಕೆಲವು ಮಿತ್ರರು ಹೇಳಿದಹಾಗೆ, ತೋಟ ತಳವಾರ ಮುಂತಾದವರಿಗೆ ಸಂಬಂಧಪಟ್ಟ ಸೆಣ್ಣುಪಟ್ಟ ಇನಾಂತಿಗಳನ್ನು ಇದರಲ್ಲಿ ಸೇರಿಸಿಲ್ಲ. ಅದಷ್ಟು ಜಾಗ್ರತೆ ಅದಕ್ಕೂ ಕಾನೂನು ತರಬೇಕೆಂದು ಮಾಡಿರುವುದಾಗಿ ಹೇಳಿದ್ದೀರಿ. ಈ ವಿಷಯ ಕಮಿಟಿಯಲ್ಲೂ ಕೂಡ ಬಹಳ ವಿಸ್ತಾರವಾಗಿ ಚರ್ಚೆಯಾಯಿತು. ಅವರ ಜಮೀನನ್ನು ತಾವು ತೆಗೆದುಕೊಂಡು ಅವರಿಗೇ ಕೊಟ್ಟು ಅವರಿಂದ ಕಂದಾಯ ತೆಗೆದುಕೊಳ್ಳುವಂತೆ ಮಾಡುತ್ತೀರೆಂದಿಟ್ಟುಕೊಳ್ಳಿ. ಆಮೇಲೆ ಅವರಿಗೇನು ಏರ್ಪಾಡು ಮಾಡುತ್ತೀರೆಂಬುದು ಅರ್ಥವಾಗುವುದಿಲ್ಲ. ಎಲ್ಲರಿಗೂ ಸಂಬಳ ಕೊಡುತ್ತೀರಾ? ತೋಟಿ, ತಳವಾರ, ಶ್ಯಾನುಭೋಗ, ಪಟೇಲ ಎಲ್ಲರಿಗೂ ಸಂಬಳ ಕೊಟ್ಟು ಆ ಕೆಲಸಕ್ಕೆ ಏರ್ಪಾಡು ಮಾಡುತ್ತೀರಾ? ಪೋಟಗೆ ಕೊಡುವುದಕ್ಕೆ ಖಜಾನೆಗೆ ಹೋಗಿ ಇರಸಾಲುಮಾಡಿ ಒಂದು ಕಾನೂ ಪೋಟಗೆಯೆಂದು ತರದೆ ಇರತಕ್ಕಂಥವರೂ ಅನೇಕ ಜನರಿದ್ದಾರೆ ನೀವೀಗ ಕೊಡುತ್ತಿರುವ ಪೋಟಗೆಯಲ್ಲ ಅರ್ಧ ಕೂಡ ಅವರ ಕೈಗೆ ಸೇರುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅದು ತಪ್ಪು.

ಶ್ರೀ ವಿ. ವೆಂಕಟಪ್ಪ.—ಹೌದು, ತಪ್ಪು. ಆದರೆ ಅದನ್ನು ಯಾರು ಸರಿ ಮಾಡುತ್ತಾರೆ? ಇಷ್ಟು ದಿನಗಳಿಂದಲೂ ಅದೇ ನಡೆದುಕೊಂಡು ಬಂದಿಲ್ಲವೇ? ಆದ್ದರಿಂದ ಎಲ್ಲರಿಗೂ ಸಂಬಳ ಕೊಟ್ಟು ಕೆಲಸಮಾಡಿಸುತ್ತೇವೆಂದು ಹೇಳಿದರೆ, ನೀವು ಏನು ಸರಿಮಾಡಬೇಕೆಂದು ಹೊರಟಿದ್ದೀರೋ ಅದೆಂದಿಗೂ ಸರಿಹೋಗುವುದಿಲ್ಲ. ಇವೊತ್ತಿನ ದಿವಸ ಹಿಂದಿನಿಂದ ನಡೆದುಬಂದಿರತಕ್ಕ ಪದ್ಧತಿಯ ಪ್ರಕಾರ ಅವರ ಜೀವನಕ್ಕೆ ಸರ್ಕಾರದವರೇನೂ ಕೊಡದೇ ಹೋದರೂ ರೈತರಾದರೂ ಅಲ್ಪ ಸ್ವಲ್ಪ ಕೊಟ್ಟು ಅವರನ್ನು ಕಾಪಾಡುವ ಪದ್ಧತಿಯಿಟ್ಟುಕೊಂಡಿದ್ದಾರೆ. ಶಾನುಭೋಗರಿಗೆ 25 ರೂಪಾಯಿಗಳನ್ನು ಕೊಡುತ್ತೀವೆಂದು ಹೇಳಿದರೂ ಅವರು ನೀವು ಎಷ್ಟು ಸೆಕ್ಯೂರಿಟಿಯನ್ನು ಕೇಳುತ್ತೀರೋ ಅಷ್ಟು ಸೆಕ್ಯೂರಿಟಿಯನ್ನು ಅವರು ಕೊಡುವುದಕ್ಕೆ ಸಾಧ್ಯವೇ? ಇವೊತ್ತಿಗೂ ತಾವು ಆಹಾರದ ಇರಾಖಿಯನ್ನು ತೆಗೆದುಕೊಂಡರೆ, ಅಲ್ಲಿ ಸಂಬಳ ತೆಗೆದುಕೊಳ್ಳುವ ಎಷ್ಟೋ ಜನರು ದನ್ನುಮಾಡಿ ಹೋಗಿಲ್ಲವೇ? ಸಂಬಳದ ಮೇಲೆ ನೇಮಕವಾದ ಪಟೇಲರು ಶ್ಯಾನುಭೋಗರು ಹಾಗೆ ಮಾಡಿದರೆ ಏನು ಮಾಡುವುದು? ಅದು ಬರೀ ಗುಮಾಸ್ತೆಗಳಿಗೆ ಸಂಬಂಧಪಟ್ಟದ್ದು, ಹಂಗಾಮಿಯಾಗಿ ಬರುವವರಿಗೆ; ಇರತಕ್ಕ ಪಟೇಲ್ ಶ್ಯಾನುಭೋಗರು, ತೋಟಿ ತಳವಾರರಿಗೆ ಸಂಬಂಧಪಟ್ಟಿದ್ದಲ್ಲ.

10-30 A.M.

ಆದುದರಿಂದ, ಕಾರ್ಯಗತ ಮಾಡುವಾಗ ಕಷ್ಟವಾಗುತ್ತದೆ. ಯಾವ ಒಂದು ಪದ್ಧತಿಯನ್ನು ಅನೂಚಾನವಾಗಿ ನಡೆಸಿಕೊಂಡು ಬರುತ್ತಿದ್ದಾರೋ ಅದನ್ನು ಈಹೊತ್ತು ತೆಗೆದುಹಾಕುವುದು ಸರಿಯಲ್ಲ; ಅದರಿಂದ ತಮ್ಮ ಕೆಲಸಕಾರ್ಯಗಳು ನಡೆಯುವುದು ಕಷ್ಟವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಬೇಕೆಂಬುದು ನನ್ನ ಉದ್ದೇಶ. ತಾವು ಈ ದಿವಸ ತಂದಿರುವುದು ಪೂರ್ತಿಯಾಗಿ ಈ ಸಮಸ್ಯೆಯನ್ನು ಪರಿಹಾರ ಮಾಡುವುದಿಲ್ಲ. ಅಂಥ ಕಾರ್ಯ ಮಾಡಬೇಕೆಂದು ಮನಸ್ಸಿನಲ್ಲಿದ್ದರೆ, ಇದನ್ನು ಸ್ವಲ್ಪ ತಡೆದು ನಿಲ್ಲಿಸಿ. ಭೂಸುಧಾರಣಾ ಸಮಿತಿಯಲ್ಲಿ ಈ ವಿಷಯ ಬಹುಮಟ್ಟಿಗೆ ಚರ್ಚೆಯಾಗಿದೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ತಾವೂ ಆ ಸಮಿತಿಯಲ್ಲಿದ್ದಿರಿ. ಆ ಸಮಿತಿಯಲ್ಲಿ ಗ್ರಾಮಾಧಿಕಾರಿಗಳ ಈ ಹಕ್ಕನ್ನು ರದ್ದುಮಾಡಬೇಕೆಂದು ಸಲಹೆ ಮಾಡಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಹೌದು, ನಾನೂ ಇದ್ದೆ.

ಶ್ರೀ ಎಲ್. ಸಿದ್ದಪ್ಪ.—ತಮ್ಮ 'ಡಿಸೆಂಟಿಂಗ್' ನೋಟ್ ಇದೆಯೆ?

ಶ್ರೀ ವಿ. ವೆಂಕಟಪ್ಪ.—ಇದೆ. ಆದರಲ್ಲಿ ಭಿನ್ನಾಭಿಪ್ರಾಯ ಹೇಗಿದೆಯೆಂದರೆ, ಓಟು ತೆಗೆದುಕೊಂಡಾಗ ಹತ್ತು ಒಂದು ಕಡೆ ಹನ್ನೆರಡು ಇನ್ನೊಂದುಕಡೆ ಬಂತು. ಆದುದರಿಂದ, ಇದರಿಂದ ಬಹಳ ಕೆಡಕಿದೆ. ಆದರೂ ಇದನ್ನು ಹೋಗಲಾಡಿಸಬೇಕಾದರೆ, ಆಗಬಹುದು. ಆದರೆ ಇದು ಸರಿಯಲ್ಲ. ಈ ಸಂಬಂಧವಾಗಿ ಅಭಿಪ್ರಾಯ ಭಿನ್ನತೆ ಹೇಗೆಂದರೆ ಶ್ರೀ ವೀರಣ್ಣ ಗೌಡರೂ ನಾನೂ ಇಬ್ಬರೂ ಮಾಜಿ ಪಟೇಲರು. ಅವರು ಇದು ಬೇಡ, ತೆಗೆದುಹಾಕಬೇಕು ಎಂದು ಹೇಳುವವರು, ನಾನು ಇರಬೇಕು ಎಂದು ಹೇಳುವವನು.

ಒಬ್ಬ ಸದಸ್ಯರು.—ನೀವೂ ಮಾಜಿ ಪಟೇಲರೆ?

ಶ್ರೀ ವಿ. ವೆಂಕಟಪ್ಪ.—ಹೌದು. ನನ್ನ ಪಟೇಲಯನ್ನು ಸರ್ಕಾರದವರು ರಾಜಕೀಯ ಕಾರಣಕ್ಕಾಗಿ ಕಿತ್ತುಕೊಂಡರು.

ಈ ವಿಷಯವನ್ನು ಮುಂದುವರಿಸಬೇಕೆಂದು ನನಗೆ ಇಷ್ಟವಿಲ್ಲ. ಹಳ್ಳಿಗಳಲ್ಲಿ ಈಗ ಏನು ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿವೆಯೋ ಅವು ಸುಸೂತ್ರ

ವಾಗಿ ನಡೆದುಕೊಂಡು ಹೋಗಬೇಕು. ಇದನ್ನು ಉತ್ತಮಪಡಿಸಿದರೆ ಒಳ್ಳೆಯದು. ಅಲ್ಲದೆ ಹಳ್ಳಿಯಲ್ಲಿ ಬೆಳೆದುಕೊಂಡು ಬಂದಿರುವ ಸಂಪ್ರದಾಯವೇನಿದೆ ಅದು, ಊರಿಗೆ ಯಜಮಾನನೆಂದು ಹೇಳಿಸಿಕೊಳ್ಳುವ ವನ ಮಾತು ಅಲ್ಲಿ ನಡೆಯಬೇಕು. ಪ್ರೀತಿ ಗೌರವ ವನ್ನು ಗಳಿಸಬೇಕಾದರೆ ಬಹಳ ಕಾಲ ಬೇಕು. ಹಾಗೆ ಪ್ರೀತಿ ಗೌರವಗಳನ್ನು ಸಂಪಾದನೆ ಮಾಡಿರುವವನನ್ನು ಕಟ್ಟಬೇಕಾದರೆ ಬಹಳ ಕಷ್ಟ; ಆದರೆ ಸುಲಭವಾಗಿ ಕಿತ್ತುಹಾಕಬಹುದು. ಸರ್ಕಾರದವರು ಮನಸ್ಸು ಮಾಡಿದರೆ ಒಂದೆರಡು ದಿವಸದಲ್ಲಿ ಆಗಿಹೋಗುತ್ತದೆ. ಆದರೆ ಇದನ್ನು ಕಟ್ಟತಕ್ಕ ಕಾರ್ಯ ಬಹಳ ಕಷ್ಟದ ಕಾರ್ಯ. ಬಹು ಹಿಂದಿನ ಕಾಲದಿಂದ ಕಟ್ಟಿಕೊಂಡು ಬಂದಿರತಕ್ಕದ್ದು. ಹೀಗೆ ಹೇಳಿದರೆ, ಏನೋ vested interest ಇದೆ, ಅದಕ್ಕೆ ಹೀಗೆ ಹೇಳುತ್ತಾರೆ ಎನ್ನುತ್ತಾರೆ. Vested interest ಇಲ್ಲದೇಯಿರುವವರು ಯಾರು? ನನ್ನ ಹೆಂಡತಿ, ನನ್ನ ಮನೆ, ನನ್ನ ಊರು. ನನ್ನ ದೇಶ ಎನ್ನುವುದೆಲ್ಲಾ vested interest, ನನ್ನ ಮನೆಯ ಘನತೆಯನ್ನು ಕಾಪಾಡಿಕೊಂಡು ಹೋಗಬೇಕೆಂದು ಹೇಳುವುದು ಕೂಡ vested interest. ಅಧ್ಯಕ್ಷರನ್ನು ಆಲ್ಲಿ ಕೂರಿಸಬೇಕು, ನಾವು ಇಲ್ಲಿ ಕುಳಿತುಕೊಳ್ಳಬೇಕು ಎಂದು ಹೇಳುವುದೂ vested interest. ನಮ್ಮನೆ vested interest ಇರತಕ್ಕವರು ಎಂದು ಹೇಳಿ ಇತರರನ್ನು ಹೀಯಾಳಿಸಿದ ಮಾತ್ರಕ್ಕೇ ದೇಶ ಉದ್ಧಾರ ಮಾಡಿದಹಾಗಾಗುವುದಿಲ್ಲ.....

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಅಭಿಮಾನ ಹೋದಮೇಲೆ ಸರಿಹೋಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಅಭಿಮಾನ ಹೋದಮೇಲೆ ಏನೂ ಉಳಿಯುವುದಿಲ್ಲ. ದೇಶಾಭಿಮಾನವಿರಬೇಕೆಂದು ಹೇಳುವಾಗ, ಇದರಲ್ಲಿ ಬೇರೆ ಎಂದು ಹೇಳುವುದು ಸರಿಯೆ?

ಶ್ರೀ ಮುಲ್ಕ ಗೋವಿಂದರೆಡ್ಡಿ.- ಅಭಿಮಾನಕ್ಕೂ ದೇಶದ ಹಿತಕ್ಕೂ ಎಲ್ಲಿ conflict ಬರುತ್ತದೆಯೋ ಅಲ್ಲಿ vested interest ಇರುತ್ತದೆ.

ಶ್ರೀ ವಿ. ವೆಂಕಟಪ್ಪ.—ಅದು ಅಭಿಪ್ರಾಯ. ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಈ ಮಸೂದೆ ತಂದಿರುವುದರಲ್ಲಿ, ಪರಿಹಾರ ಕೊಡುವುದರಲ್ಲಿ ಯಾರು ಕಷ್ಟದಲ್ಲಿದ್ದಾರೊ ಅವರಿಗೆ ಸಹಾಯ ಮಾಡಬೇಕೆಂಬುದು ತಮ್ಮ ಆಶಯವಾಗಿದ್ದರೆ ಬಡವರಿಗೆ ಉಚಿತವಾಗಿ ಜಮೀನು ಕೊಡಬಹುದು. ಯಾರು ಅದರಿಂದಲೇ ಜೀವನ ಮಾಡುತ್ತಿದ್ದಾರೋ ಅವರಿಗೆ ಜೀವನ ನಡೆಸುವುದಕ್ಕೆ ತಕ್ಕಷ್ಟು ಏರ್ಪಾಡು ಮಾಡುವುದು ಸರ್ಕಾರದ ಕರ್ತವ್ಯವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now rise for lunch and meet again at

---

11-5 A.M.

The House rose for Lunch at Thirty-Five Minutes past Ten of the Clock and met again at Five Minutes past Eleven of the Clock.

[Mr. SPEAKER in the Chair.]

Disqualification alleged to have been incurred by Sri T. Siddalingaiya.

Mr. SPEAKER.—Sri Siddalingaiya, have you got any additional statement to make?

Sri T. SIDDALINGAIYA.—In the statement I made earlier in the day, I have already met the main allegations made against me by Sri Narayana Reddy. I have nothing more to add at this stage.

Mr. SPEAKER.—I shall say what I have to state at 11-30. The debate will continue now.

MYSORE (PERSONAL AND MISCELLANEOUS) INAMS ABOLITION BILL, 1953.

(Motion to consider (continued).

*ಶ್ರೀ ಎಂ. ಚಿಕ್ಕಲಿಂಗಯ್ಯ (ಮುಳವಳ್ಳಿ ಅನುಸೂಚಿತ ಜಾತಿಗಳ).—ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಈ ಮಸೂದಾ ಕಾನೂನಿನ ಕೆಲವು ಅಂಶಗಳ ವಿಚಾರದಲ್ಲಿ ವಿರೊ ಧಿಸಬೇಕಾಗಿದೆ. ನಮ್ಮ ಮಾನ್ಯ ಮಂತ್ರಿಗಳು ಮೊದಲೇ ಇದರಲ್ಲಿ ನ್ಯೂನಾತಿರೇಕಗಳಿವೆ, ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕಬೇಕೆಂಬುದಾಗಿ ತಿಳಿಸಿ ಒಪ್ಪಿಕೊಂಡಿದ್ದಾರೆ. ಹೀಗೆ ಇದನ್ನು ತಂದಿನುವುದಕ್ಕಿಂತ ಮುಂಚೆಯೇ ಹೀಗೆ ಒಪ್ಪಿಕೊಂಡಿರುವಾಗ ಇದು ಮುಂದೆ ಯಾವ ರೀತಿ ಕಾರ್ಯರೂಪದಲ್ಲಿ ನಡೆಯುತ್ತದೆಂಬುದು ಯೋಚನೆ ಮಾಡುವ ವಿಚಾರ. Tiller of the soil should be the owner of the land ಎನ್ನುವುದು ಇಂಡಿಯನ್ ಕಾಂಗ್ರೆಸ್ ತತ್ವ ವೆಂದು ಈ ಸರ್ಕಾರ ಅದನ್ನೊಪ್ಪಿ ಈ ರೀತಿ ಮಾಡುತ್ತಿದೆಯೇ ಎಂದು ನೋಡೋಣ. ನಿಜವಾಗಿಯೂ ಮೊದಲು ಇದನ್ನು ತಂದವರು ಈ ಸರ್ಕಾರವಲ್ಲ, ಇವರ ಹಿಂದಿನ ಕಾಂಗ್ರೆಸ್ ಸರ್ಕಾರ. 1950ರಲ್ಲಿ ಮಾನ್ಯ ಅಧ್ಯಕ್ಷರು ರೆವೆನ್ಯೂ ಸಚಿವರಾಗಿದ್ದಾಗ ಈ ನಭೆಯ ಮುಂದೆ ಮಸೂದಾ ಕಾನೂನನ್ನು ತಂದಿದ್ದರು. ನಿಜವಾಗಿಯೂ ಇದರ ಕೀರ್ತಿ ಅವರಿಗೆ ಸಲ್ಲಬೇಕಾಗಿತ್ತು, ಆದರೆ ಸೆಲೆಕ್ಟ್ ಕಮಿಟಿಯ ವರದಿಯಾಗಿ ಆ ಮಸೂದೆ ಅಂಗೀಕೃತ ವಾಗುವಷ್ಟರಲ್ಲಿ, ಕೆಲವು ದೋಷ ದೋಷಗಳನ್ನು ಅದರಲ್ಲಿ ನರಿಪಡಿಸಬೇಕೆಂದು ನಿಲ್ಲಿಸಿದರು. ಈಗ ಎರಡು ವರ್ಷಗಳ ಮೇಲೆ ಇದನ್ನು ತಂದು ಈಗ ಇದನ್ನು ಸೆಲೆಕ್ಟ್ ಕಮಿಟಿ ಪರಿಶೀಲನೆಗೆ ಹಾಕಬೇಕೆಂದು ಹೇಳುತ್ತಾರೆ. ನಾಳೆ ಸೆಲೆಕ್ಟ್ ಕಮಿಟಿಯಲ್ಲಿ ಯಾವರೀತಿಯ ಸನ್ನಿವೇಶ ಬರುತ್ತದೆಯೋ ಎಂಬ ಅನುಮಾನ ನಮಗೆ ಬರುತ್ತದೆ. ಸರ್ಕಾರದವರು ಯಾವ ಕಾನೂನನ್ನು ತಂದರೂ ಧೈರ್ಯವಾಗಿ ಜಾರಿ ಕೊಡುವುದಿಲ್ಲ. ಉದಾಹರಣೆಗೆ, ಟೆನೆನ್ಸಿ ಕಾನೂನು ತಂದರು, ಕೆಲವು ತಾಲ್ಲೂಕುಗಳಲ್ಲಿ ಜಾರಿ ಮಾಡಿದರು, ಅಲ್ಲಿಂದ ಬೇಕಾದಷ್ಟು ದೂರುಗಳು ಬರುತ್ತಿವೆ, ಅವುಗಳನ್ನು ಸರಿಪಡಿಸುವುದಕ್ಕೆ ಸರ್ಕಾರಕ್ಕೆ ಕಷ್ಟವಾಗಿದೆ. ಈಗ ಈ ಕಾನೂನು ತಂದು ಕೆಲವು ರೀತಿಯ ಇನಾಂಗಳು 'ಪರ್ ಸನಲ್ ಮತ್ತು ಮಿಸಲೇನಿಯಸ್' ಇನಾಮ್‌ಗಳು ಮಾತ್ರ